

2
ಒಂದು ದಿನ ಇರುಳಿನಲಿ
ಕಡಲ ತೀರದಲಿ ಆಡುವಾಗ
ನೀನು ನನ್ನನ್ನು ಕೇಳಿದೆ;
''ನಿನಗೇನು ಇಷ್ಟ? ಚಂದ್ರ,
ತಾರೆ, ಕಡಲು, ಇರುಳ ತಂಪು'';
ನಾನು,
ಬಹಳ ಹೊತ್ತು ಅವನನ್ನೇ
ದಿಟ್ಟಿಸುತ್ತಿದ್ದೆ,
ರೆಪ್ಪೆ ಪಿಳುಕಿಸದೆ!



3
ಒಂದು ಸಲ ಕಡಲು
ನನ್ನವನಿಗೆ ಹೇಳಿತು,
''ನನ್ನ ಆಳ ಅಗಲ ನೋಡಿರು
ವಿಯಲ್ಲ, ಮತ್ತೆ ಏಳಲಾಗದು''
ನಗುತ ನೀನು ಹೇಳಿದೆ,
ಕಡಲಿಗೆ,
ನನ್ನ ಹುಡುಗಿಯ ಕೆನ್ನೆ
ಗುಳಿಯಲಿ ಬಿದ್ದಾಗಲೆ ಅರಿತೆ,
ಜಗದ ಯಾವ ಕಡಲಿಗೂ
ಅಂಜಬೇಕಿಲ್ಲ, ಅದರ
ಆಳ ಅಗಲ ಯಾವ
ಲೆಕ್ಕಕ್ಕೂ ಇಲ್ಲ!



4
ನಿನ್ನ ನೆನೆದಂತೆಲ್ಲ,
ನೋಡಿದಂತೆಲ್ಲ
ಹೊಸ, ಹೊಸ ಭಾವಗಳ
ಮೆರವಣಿಗೆ ಮನದ ತುಂಬೆಲ್ಲ
ಪದಗಳು ನಾಚಿ ನೀರಾದವು
ತಮಗೆ ನಿನ್ನ ಬಣ್ಣಿಸಲಾಗದಕೆ
ಕೊನೆಗೆ ನಾನು ಕವಿತೆ ಬರೆದೆ,
ಕೇವಲ,
''ನೀನು''
ಅದು ಜಗತ್ತಿನ ಅತ್ಯಂತ
ಸುಂದರ ಕಾವ್ಯವಾಯಿತು.